

ಪತ್ನಿ ಸವಿತಾ ಅವರೊಂದಿಗೆ ಡಿ.ಎಸ್‌. ನಾಗಭೂಷಣ

ಅವರು ಉದ್ಯೋಗಕ್ಕೆ ಸೇರಿದ್ದು ಆಕಾಶವಾಣಿ, ನವದೆಹಲಿಯ ಕನ್ನಡ ವಾರ್ತಾ ವಿಭಾಗಕ್ಕೆ. ಬೆಂಗಳೂರಿನಲ್ಲಿ ವಿದ್ಯಾರ್ಥಿ ದೆಸೆಯಿಂದಲೂ ಸಮಾಜವಾದದ ಬಗ್ಗೆ ಒಲವು ಬೆಳೆಸಿಕೊಂಡಿದ್ದ ಅವರಿಗೆ ಅದನ್ನು ಇನ್ನಷ್ಟು ತೀವ್ರವಾಗಿಯೂ ನಿಖರವಾಗಿಯೂ ಬೆಳೆಸಿಕೊಳ್ಳಲು ಸಾಧ್ಯವಾದದ್ದು ಅವರು ದೆಹಲಿ ನಿವಾಸಿಯಾದುದರಿಂದಲೇ ಎನ್ನಬಹುದು. ಆಗ್ಗೆ ದೆಹಲಿ – ಹಲವಾರು ದೃಷ್ಟಿಗಳಿಂದ ಕಾಂಗ್ರೆಸ್ ಒಲವು ತೊರೆದಿದ್ದ ಸಮಾಜವಾದಿಗಳ, ಅದರಲ್ಲೂ ವಿಶೇಷವಾಗಿ ಲೋಹಿಯಾ ಅವರ ವಿಚಾರಧಾರೆಯನ್ನು ಆತುಕೊಂಡಿದ್ದ ರಾಜಕಾರಣಿಗಳು, ಅಧ್ಯಾಪಕರು, ಲೇಖಕರು, ಚಿಂತಕರ ಕೇಂದ್ರವಾಗಿತ್ತು. ಲೋಹಿಯಾ ಅವರ ವಿಚಾರಗಳು ದೇಶದ ಇನ್ನಿತರ ಭಾಗಗಳಲ್ಲಿ ಪ್ರಭಾವ ಬೀರಿದುದಕ್ಕಿಂತಲೂ ಹೆಚ್ಚು ಗುಣಾತ್ಮಕವಾಗಿ ಪ್ರಭಾವ ಬೀರಿದ್ದು ಉತ್ತರ ಪ್ರದೇಶ, ಬಿಹಾರ ಮತ್ತು ದೆಹಲಿ ಪ್ರದೇಶಗಳಲ್ಲಿ. ನಾನು 2010ರಲ್ಲಿ ದೆಹಲಿಯಲ್ಲಿ ಲೋಹಿಯಾ ಜನ್ಮಶತಾಬ್ದಿಯನ್ನು ಆಯೋಜಿಸುವ ಸಂದರ್ಭದಲ್ಲಿ ಹಿಂದಿಯ ಸುಪ್ರಸಿದ್ಧ ವಿಮರ್ಶಕ ಪ್ರೊ. ನಾಮವರ್ ಸಿಂಹ ಅವರು ವಿಶ್ವವಿದ್ಯಾಲಯಗಳ ಪಠ್ಯಕ್ರಮದಲ್ಲಿ ಲೋಹಿಯಾರ ಬರಹಗಳನ್ನು ಅಳವಡಿಸಿದ್ದ ಸಂಗತಿಯನ್ನು ತಿಳಿಸಿದ್ದರು. ಪ್ರಜ್ಞಾವಂತ ಮತ್ತು ಅತ್ಯಂತ ಅಪರೂಪದ ರಾಜಕಾರಣಿ, ಮುತ್ಸದ್ದಿಯಾಗಿದ್ದ ಲೋಹಿಯಾ ಅವರ ಸಾಮಾಜಿಕ, ಸಾಂಸ್ಕೃತಿಕ ಬರಹಗಳು ಉನ್ನತ ಶಿಕ್ಷಣ ಪಠ್ಯಕ್ರಮಗಳಲ್ಲಿ ಅರವತ್ತು ಎಪ್ಪತ್ತರ ದಶಕಗಳಿಂದಲೂ ಸೇರ್ಪಡೆಯಾಗಿದ್ದವು. ಅದೇ ಕಾಲಕ್ಕೆ ದೆಹಲಿ ನಿವಾಸಿಯಾದ ನಾಭೂ ಅವರಿಗೆ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ ಹಾಗೂ ಮತ್ತಿತರ ಕಾಲೇಜುಗಳಲ್ಲಿ ಕಲಿಯುತ್ತಿದ್ದ ಮತ್ತು ಕಲಿಸುತ್ತಿದ್ದ ಹಾಗೂ ರಾಜಕೀಯ ವಲಯದಲ್ಲಿ ತೊಡಗಿಕೊಂಡಿದ್ದ ಅನೇಕರ ಸಂಪರ್ಕ ಸಿಕ್ಕಿತ್ತು. ಇವರ ಗೆಳೆಯ ಜಸ್‌ವೀರ್ ಸಿಂಗ್, ಆತನ ಗುರು ಕಿಷನ್ ಪಟ್ನಾಯಕ್, ಮುಂದೆ ಕೇಂದ್ರದಲ್ಲಿ ಮಂತ್ರಿಯಾಗಿದ್ದ ದಿಗ್ವಿಜಯ ಸಿಂಗ್ ಇನ್ನೂ ಮುಂತಾದ ಹಲವಾರು ಸಮಾಜವಾದಿ